# ಎಲಿವೇಟೆಡ್ ಕಾರಿಡಾರ್ ಬೇಡ

## ಸಾರ್ವಜನಿಕ ಚರ್ಚೆಯಲ್ಲಿ ಐಐಎಸ್ಸಿ ವಿಜ್ಞಾನಿ ಟಿ.ವಿ.ರಾಮಚಂದ್ರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉದ್ದೇಶಿತ ಎಲಿವೇಟೆಡ್ ಕಾರಿಡಾರ್ ಮತ್ತು ಉಕ್ಕಿನ ಮೇಲ್ಸೇತುವೆ ನಮಗೆ ಬೇಡ. ಉಪನಗರ ರೈಲು, ಮೆಟ್ರೊ ರೈಲು ಮತ್ತು ಬಸ್ ಸೇವೆಯಗಳು ಬೇಕು' ಎಂಬ ಮಾತು ನಗರದಲ್ಲಿ ಮತ್ತೊಮ್ಮೆ ಧ್ವನಿಸಿತು.

ಬೆಂಗಳೂರು ಉಳಿಸಿ ಸಮಿತಿಯು ನಗರದಲ್ಲಿ ಭಾನುವಾರ ಆಯೋಜಿಸಿದ್ದ ಸಾರ್ವಜನಿಕ ಚರ್ಚೆಯಲ್ಲಿ ವಿಷಯ ತಜ್ಞರು ಮತ್ತು ನಗರ ವಾಸಿಗಳು ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

'ಸುಮಾರು ₹ 33 ಸಾವಿರ ಕೋಟಿ ಖರ್ಚು ಮಾಡಿ ಕಟ್ಟುವ, ಕಾಂಕ್ರೀಟ್ ಕಾರಿಡಾರ್ ನಮಗೆ ಬೇಡ. ಕಡಿಮೆ ದರದಲ್ಲಿ ಹೆಚ್ಚು ಪ್ರಯಾಣಿಕರನ್ನು ಸಾಗಿಸುವ, ಕಡಿಮೆ ಮಾಲಿನ್ಯವನ್ನು ಉಂಟು ಮಾಡುವ ರೈಲು ಮತ್ತು ಬಸ್ ಸೌಲಭ್ಯಗಳಂತಹ ಸಮೂಹ ಸಾರಿಗೆಯನ್ನು ವಿಸ್ತರಿಸಿ' ಎಂದು ಬಹುತೇಕರು ಒತ್ತಾಯಿಸಿದರು.

ಐಐಎಸ್ಸಿ ವಿಜ್ಞಾನಿ ಟಿ.ವಿ. ರಾಮಚಂದ್ರ, 'ಎಲಿವೇಟೆಡ್ ಕಾರಿಡಾರ್‌ನಿಂದ ಕಾರುಗಳಲ್ಲಿ ಓಡಾಡುವ ಗಣ್ಯರಿಗೆ ಹೆಚ್ಚು ಅನುಕೂಲ ಆಗಲಿದೆ. ಈ ಕಾರಿಡಾರ್‌ನಿಂದ ಖಾಸಗಿ ವಾಹನಗಳ ಬಳಕೆ ಮತ್ತಷ್ಟು ಹೆಚ್ಚಲಿದೆ. ಸಾಮಾನ್ಯರು ದಟ್ಟಣೆಯಲ್ಲಿಯೇ ಸಂಚರಿಸುವ ಸ್ಥಿತಿ ಸೃಷ್ಟಿಯಾಗಲಿದೆ' ಎಂದು ಅವರು ಹೇಳಿದರು.

'ಈ ಯೋಜನೆಯಿಂದಾಗುವ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳನ್ನು ಸರ್ಕಾರ ಸಮೀಕ್ಷೆ ಮಾಡಿಲ್ಲ. ನಗರದ ಶೇ 94ರಷ್ಟು ಪ್ರದೇಶ ಈಗಾಗಲೇ ಕಾಂಕ್ರೀಟ್ ಕಾಡಾಗಿದೆ. ಕಾರಿಡಾರ್ ಯೋಜನೆಗಾಗಿ ಸುಮಾರು 16,000 ಮರಗಳನ್ನು ಕಡಿಯಬೇಕಾಗುತ್ತದೆ. ಅದರಿಂದ ಆಮ್ಲಜನಕ ಕೊರತೆ ಉಂಟಾಗಲಿದ್ದು, ಮಾಲಿನ್ಯ, ತಾಪಮಾನ ಏರಿಕೆ ಆಗಲಿದೆ. ಗುತ್ತಿಗೆದಾರರು ಮತ್ತು ರಾಜಕಾರಣಿಗಳಿಗೆ ಮಾತ್ರ ಲಾಭವಾಗಲಿದೆ' ಎಂದು ದೂರಿದರು.

ಸಾರಿಗೆ ತಜ್ಞರೂ ಆಗಿರುವ ಐಐಎಸ್ಸಿ ವಿಜ್ಞಾನಿ ಆಶಿಶ್ ವರ್ಮಾ, 'ಸಂಚರಿಸುವ ವಾಹನಗಳ ಸಂಖ್ಯೆಗೆ ಅನುಗುಣವಾಗಿ ಕಾರಿಡಾರ್ ನಿರ್ಮಿಸಲು ಯೋಜಿಸಿದ್ದಾರೆ. ಇದರ ಬದಲಾಗಿ, ಸಂಚರಿಸುವ ಜನರ ಸಂಖ್ಯೆಗೆ ಅನುಗುಣವಾಗಿ ಸಮೂಹ ಸಾರಿಗೆ ಬಲಪಡಿಸಬೇಕಿದೆ. ಇದರಿಂದ ಇಂಧನ ಉಳಿಯುತ್ತದೆ. ಮಾಲಿನ್ಯ ತಗ್ಗುತ್ತದೆ. ನಗರವು ಜೀವಿಸಲು ಯೋಗ್ಯವಾದ ತಾಣವಾಗುತ್ತದೆ' ಎಂದು ತಿಳಿಸಿದರು.

'ಬಸ್‌ಗಳ ಸಂಖ್ಯೆ ಹೆಚ್ಚಿಸಲು ಕೇಳಿದರೆ, ಅವುಗಳು ರಸ್ತೆಯ ಹೆಚ್ಚು ಜಾಗವನ್ನು ಆಕ್ರಮಿಸುತ್ತವೆ ಎಂಬ ಉತ್ತರವನ್ನು ಅಧಿಕಾರಿಗಳು ಕೊಡುತ್ತಾರೆ. ಸಂಚಾರದ ವೇಳೆ ನಗರದಲ್ಲಿ ರಸ್ತೆಗಳ 25 ಲಕ್ಷ ಚದರ ಅಡಿ ಜಾಗವನ್ನು ಕಾರುಗಳು, 3 ಲಕ್ಷ ಚದರ ಅಡಿ ಜಾಗವನ್ನು ಬೈಕ್‌ಗಳು ಆಕ್ರಮಿಸುತ್ತವೆ. 1.8 ಲಕ್ಷ ಚದರ ಅಡಿ ಜಾಗವನ್ನು ಮಾತ್ರ ಬಸ್‌ಗಳು ಆವರಿಸುತ್ತವೆ. ಬಸ್‌ಗಳು ಆಕ್ರಮಿಸುವ ಸ್ಥಳಕ್ಕಿಂತ 207 ಪಟ್ಟು ಹೆಚ್ಚು ಸ್ಥಳವನ್ನು ಇತರೇ ವಾಹನಗಳು ಆಕ್ರಮಿಸುತ್ತವೆ. ಇದರಿಂದಾಗಿಯೇ ದಟ್ಟಣೆ ಉಂಟಾಗುತ್ತದೆ. ವ್ಯಕ್ತಿಯೊಬ್ಬ ಕಾರಿನಲ್ಲಿ ರಸ್ತೆಗಿಳಿದರೆ 4.8 ಮೀ. ಜಾಗ ಬೇಕಾಗುತ್ತದೆ. ಅದೇ ವ್ಯಕ್ತಿ ಬಸ್ ಹತ್ತಿದರೆ 0.38 ಮೀ ರಸ್ತೆಯ ಜಾಗ ಸಾಕಾಗುತ್ತದೆ' ಎಂದು ಅವರು ಸಮೀಕ್ಷೆಯ ಅಂಕಿ-ಅಂಶ ನೀಡಿದರು.

'ಕಾರಿಡಾರ್‌ನಿಂದ ವಾಹನಗಳು ಹೆಚ್ಚಾಗಿ, ಶೇ 3 ರಷ್ಟು ಇಂಧನ ಬಳಕೆ ಏರಿಕೆಯಾಗುತ್ತದೆ. ಅದೇ ಕಾರಿಡಾರ್‌ನಲ್ಲಿ ಮೆಟ್ರೊ ಮಾರ್ಗ ಬಂದರೆ, ಶೇ 5 ರಷ್ಟು ಇಂಧನ ಬಳಕೆ ಇಳಿಕೆಯಾಗುತ್ತದೆ' ಎಂದರು.




ಟಿ.ವಿ.ರಾಮಚಂದ್ರ ಮಾತನಾಡಿದರು. ಸಿವಿಕ್ ಬೆಂಗಳೂರು ಸಮೂಹದ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್, ಆರ್.ಎಲ್.ಮೌರ್ಯಾಸ್, ಸಂಜೀವ್ ದ್ಯಾಮಣ್ಣನವರ್ ಹಾಗೂ ಆಶೀಶ್ ವರ್ಮಾ ಇದ್ದರು -ಪ್ರಜಾವಾಣಿ ಚಿತ್ರ

### 'ಅಂತಿಮವಾಗದ ಮೆಟ್ರೊ ನಕ್ಷೆ'

'ನಗರದ ಎಲ್ಲ ದಿಕ್ಕುಗಳಲ್ಲಿ ರೈಲು ಮಾರ್ಗಗಳಿವೆ. ಅಲ್ಲಿ ಉಪನಗರ ರೈಲು ಸಾರಿಗೆಯನ್ನು ಪರಿಚಯಿಸಬಹುದಾಗಿದೆ. ಅದರಿಂದ 25 ಲಕ್ಷ ಜನರಿಗೆ ಅನುಕೂಲ ಆಗಲಿದೆ. ಕೆಂಪೇಗೌಡ ವಿಮಾನ ನಿಲ್ದಾಣ ನಿರ್ಮಾಣಗೊಂಡು 15 ವರ್ಷ ಕಳೆಯುತ್ತ ಬಂದರೂ, ಅಲ್ಲಿಗೆ ತಲುಪುವ ಮೆಟ್ರೊ ಮಾರ್ಗದ ನಕ್ಷೆಯನ್ನೇ ಅಂತಿಮಗೊಳಿಸಲು ನಮ್ಮ ಅಧಿಕಾರಶಾಹಿಗೆ ಸಾಧ್ಯವಾಗಿಲ್ಲ' ಎಂದು ಪ್ರಜಾರಾಗ್ ಸಮೂಹದ ಸಂಚಾಲಕ ಸಂಜೀವ್ ದ್ಯಾಮಣ್ಣನವರ್ ಅವರು ದೂರಿದರು.

**ಮುಖ್ಯಾಂಶಗಳು**

- ಕಾಂಕ್ರೀಟ್ ಕಾರಿಡಾರ್ ನಮಗೆ ಬೇಡ
- ಯೋಜನೆಗಾಗಿ ಸುಮಾರು 16,000 ಮರ ಹನನ
- ಉಪನಗರ ರೈಲು ಯೋಜನೆ ಜಾರಿಗೊಳಿಸಿ

ಯಲಹಂಕದಿಂದ ನಗರದ ಕೇಂದ್ರ ಭಾಗಕ್ಕೆ ಬರಬೇಕಾದರೆ ಎರಡು ತಾಸು ಬೇಕು. ಉಕ್ಕು, ಕಾಂಕ್ರೀಟ್, ಜಲ್ಲಿ, ದೊಂಬು ನೋಡುವೆ, ಯಾವುದಾದರೂ ಪರವಾಗಿಲ್ಲ. ಮೊದಲು ನೋಡುವೆ ಕಷ್ಟ.
**ಮಹದೇವ್**, ಜೀವನ್ ಬಿಮಾ ನಗರ

ಎಲಿವೇಟೆಡ್ ಕಾರಿಡಾರನ್ನು ಖಾಸಗಿ ಸಹಭಾಗಿತ್ವದಲ್ಲಿ ನಿರ್ಮಿಸಲಾಗುತ್ತದೆ. ಅದರ ಮೇಲೆ ಸಂಚರಿಸಲು ಸುಂಕ (ಟೋಲ್) ಕಟ್ಟುವ ಸ್ಥಿತಿ ಬರಲಿದೆ.
**ಆರ್.ಎಲ್.ಮೌರ್ಯಾಸ್**, ಸಂಚಾಲಕ, ಬೆಂಗಳೂರು ಉಳಿಸಿ ಸಮಿತಿ